KATK810049332022

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಸಿರಾ**

**ಸಿ.ಸಿ. ನಂ.3875/2022**

**ಪಿರ್ಯಾಧಿ** : ರಾಜ್ಯದ ಪರವಾಗಿ ಕಳ್ಳಂಬೆಳ್ಳ ಪೊಲೀಸರು

ವಿರುದ್ಧ

**ಆರೋಪಿಗಳು** : ಲೋಕೇಶ್ ಮತ್ತು ಇತರರು

**ಆರೋಪಣೆ**

**ಶ್ರೀ. ನರಸಿಂಹಮೂರ್ತಿ.ಎ, ಬಿ.ಎ.ಎಲ್ಎಲ್.ಬಿ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಆದ ನಾನು**

ಆರೋಪಿಗಳುಃ

1. ಲೋಕೇಶ್ ಬಿನ್ ವೀರಕ್ಯಾತರಾಯಪ್ಪ, 26 ವರ್ಷ,
   ವಾಸಃ ಗುಡಿಬಂಡೆ ಮಂಡಲ್, ಮಡಕಸಿರಾ ತಾಲ್ಲೂಕು,
   ಸತ್ಯಸಾಯಿ ಜಿಲ್ಲೆ, ಅನಂತಪುರ, ಆಂಧ್ರಪ್ರದೇಶ.
2. ಸಮೀವುಲ್ಲ ಎಂ.ಆರ್. ಅಃ ರಮಾಜ್
   ಬಿನ್ ರಜಕ್ ಸಾಬ್, 38 ವರ್ಷ,
   ವಾಸಃ ಮದಲಪಲ್ಲಿ ಗ್ರಾಮ, ಮಡಕಸಿರಾ ತಾಲ್ಲೂಕು,
   ಸತ್ಯಸಾಯಿ ಜಿಲ್ಲೆ, ಅನಂಪುರ, ಆಂಧ್ರಪ್ರದೇಶ.
3. ಅವಿನಾಶ್ ಬಿನ್ ಪಾಂಡುರಂಗಪ್ಪ, 28 ವರ್ಷ,
   ವಾಸಃ ಹೊಸಬಿಜ್ಜನಬೆಳ್ಳ ಗ್ರಾಮ, ಬುಕ್ಕಾಪಟ್ಟಣ ಹೋಬಳಿ,
   ಸಿರಾ ತಾಲ್ಲೂಕು, ತುಮಕೂರು.
4. ಅಭಿಲಾಶ್ ಬಿನ್ ಶಾಂತರಾಜು, 31 ವರ್ಷ,
   ವಾಸಃ ಗಂಗಯ್ಯನಮಠ, ಹಾಗಲವಾಡಿ ಹೋಬಳಿ,
   ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ.

5. ರಂಗನಾಥ ಬಿನ್ ಲಕ್ಷ್ಮೀನರಸಿಂಹಯ್ಯ, 22 ವರ್ಷ,
ವಾಸಃ ಅಮಲಗೊಂದಿ, ಕಳ್ಳಂಬೆಳ್ಳ ಹೋಬಳಿ,
ಸಿರಾ ತಾಲ್ಲೂಕು, ತುಮಕೂರು.

6. ಲಕ್ಷ್ಮೀನರಸಿಂಹಯ್ಯ ಬಿನ್ ಲಕ್ಷ್ಮಣ, 48 ವರ್ಷ,
ವಾಸಃ ಅಮಲಗೊಂದಿ, ಕಳ್ಳಂಬೆಳ್ಳ ಹೋಬಳಿ,
ಸಿರಾ ತಾಲ್ಲೂಕು, ತುಮಕೂರು.

**ನಿಮ್ಮ ವಿರುದ್ಧ ಮಾಡುವ ಆರೋಪಣೆ ಏನೆಂದರೆ,**

ದಿಃ02.07.2022 ರಂದು ಬೆಳಗ್ಗೆ 10.00 ಗಂಟೆ ಸಮಯದಲ್ಲಿ ಸಿರಾ ತಾಲ್ಲೂಕು, ಕಳ್ಳಂಬೆಳ್ಳ ಪೋಲೀಸ್ ಠಾಣಾ ವ್ಯಾಪ್ತಿಯ ಗೋಪಾಲದೇವರಹಳ್ಳಿ, ಗೇಟ್ ಬಳಿ ಹಾದು ಹೋಗಿರುವ ಮೈಸೂರು-ಸಿರಾ ಮುಖ್ಯ ರಸ್ತೆಯಲ್ಲಿ ಆರೋಪಿಗಳಾದ ನೀವುಗಳು ಅಕ್ರಮವಾಗಿ ಹಣ ಗಳಿಸುವ ಉದ್ದೇಶದಿಂದ ಹೊಸಕೆರೆ ಸಂತೆಯಲ್ಲಿ ರೂ.1,02,000/- ಬೆಲೆ ಬಾಳುವ 51 ಹಸುಗಳ ಎಳೆಯ ಕರುಗಳನ್ನು 3ನೇ ಆರೋಪಿ ತಂದಿದ್ದ ಕೆಎ-43-3763 ಮತ್ತು 4ನೇ ಆರೋಪಿ ತಂದಿದ್ದ ಕೆಎ-50-ಎ-0881ನೇ ಟಾಟಾ ಏಸ್ ವಾಹನಗಳಲ್ಲಿ ಸಾಗಾಣಿಕೆಯ ನಿಯಮ ಪಾಲಿಸದೆ ಖಸಾಯಿಖಾನೆಗೆ ಕಳುಹಿಸಲು ಒಂದರ ಪಕ್ಕ ಒಂದರಂತೆ ಒತ್ತೊತ್ತಾಗಿ ಹಿಂಸೆಯಾಗುವಂತೆ ತುಂಬಿಕೊಂಡು ಮೇವು ಮತ್ತು ನೀರು ನೀಡದೆ, ಗಾಳಿ ಬೆಳಕು ಇಲ್ಲದ ವಾಹನದಲ್ಲಿ ಟಾರ್ಪಲ್ ನಿಂದ ಮುಚ್ಚಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಪ್ರಾಣಿಗಳನ್ನು ಸಾಗಾಣಿಕೆ ಮಾಡಲು ಯಾವುದೇ ಪ್ರಾಧಿಕಾರದ ಪರವಾನಗಿ ಪಡೆಯದೆ ಹಾಗೂ ಯಾವುದೇ ಪರವಾನಗಿ ಇಲ್ಲದೆ ಸಾಗಾಣಿಕೆ ಮಾಡುತ್ತಿದ್ದರಿಂದ ಕಲಂ.4, 5, 12(1) ಕರ್ನಾಟಕ ಗೋಹತ್ಯೆ ತಡೆಗಟ್ಟುವಿಕೆ ಮತ್ತು ಜಾನುವಾರುಗಳ ಸಂರಕ್ಷಣೆ ಕಾಯ್ದೆ-2020, ಕಲಂ-11(1)(ಎ) ಪ್ರಾಣಿಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆ-1960, ಕಲಂ.177, 192 ಐ.ಎಂ.ವಿ ಆಕ್ಟ್ ಮತ್ತು ಪ್ರಾಣಿಗಳ ಸಾಗಾಣಿಕೆ ಕಾಯ್ದೆ-1978( ಕಲಂ.46, 47, 48, 49, 50, 51, 52, 53, 54, 55, 56) ಮತ್ತು ಐ.ಪಿ.ಸಿ ಕಲಂ.428, 429 ರ ರೀತ್ಯಾ ಶಿಕ್ಷಾರ್ಹ ಅಪರಾಧವನ್ನು ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತೀರಿ ಎಂದು ಆರೋಪಣೆ ಮಾಡಲಾಗಿದೆ.

**ಆರೋಪಿಗಳ ಹೇಳಿಕೆ**

ಪ್ರಶ್ನೆಃ ನಿಮಗೆ ಓದಿ ಹೇಳಿದ ಆರೋಪಣೆ ತಿಳಿಯಿತೇ ?

ಉತ್ತರಃ

ಪ್ರಶ್ನೆಃ ನೀವು ಮೇಲಿನ ಅಪರಾಧಗಳನ್ನು ಒಪ್ಪಿಕೊಳ್ಳುವಿರಾ ? ಅಥವಾ ವಿಚಾರಣೆ ಆಗಬೇಕೇ ?

ಉತ್ತರಃ

(ಈ ಮೇಲಿನಂತೆ ಆರೋಪಿಗಳನ್ನು ಪ್ರಶ್ನಿಸಿ ಅವರು ನೀಡಿದ ಉತ್ತರವನ್ನು ಬರೆದುಕೊಳ್ಳಲಾಗಿದೆ)

**ಸಹಿ/-**
**(ನರಸಿಂಹಮೂರ್ತಿ .ಎ)**
ದಿನಾಂಕಃ13.11.2025 **ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.**
**ಸಿರಾ.**